ತಾರೀಖು 18ನೆ ಜೂ 1907.

ನಂ. ಜೆ. 7908—ಜಿ. ಎಂ. 335-06—2, 1907ನೆ ಇಸವಿಯ ಜೂ 17ನೆ ತಾರೀಖಿನ ಪೂರ್ವಾಹ್ನದಲ್ಲಿ ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರಟೆರಿಯವರ ಉದ್ಯೋಗದ ಚಾರ್ಜನ್ನು ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ., ಬಿ. ಎಲ್., ರವರು ಒಪ್ಪಿಸಿದರು ಮತ್ತು ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರ್, ಬಿ. ಎ., ಯವರು ವಹಿಸಿದರು.

ತಾರೀಖು 8ನೆ ಜೂ 1907.

ನಂ. ಫೈ. 9082—ಎಸ್. ಆರ್. 140-06, ಸ 1900ನೆ ಇಸವಿಯ ಮೈಸೂರು ಸ್ಟ್ಯಾಂಪ್ ಮತ್ತು ಕೋರ್ಟು ಫೀಜು ರೆಗ್ಯುಲೇಷನುಗಳಿಂದ ಕೊಡಲ್ಪಟ್ಟ ಅಧಿಕಾರಗಳನ್ನೂ ಮತ್ತು ಈ ವಿಷಯದಲ್ಲಿ ಸಹಾಯಕವಾದ ಇತರ ಅಧಿಕಾರಗಳನ್ನೂ ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಹುಕುಂ ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಹುಕುಂ—ನಂ. ಫೈ. 9083-125—ಎಸ್. ಆರ್. 140-06-2.

ಸ್ಟ್ಯಾಂಪು ಹುಟ್ಟುವಳಿಯ ಆಡಳಿತಕ್ಕಾಗಿ ಈಗ ಚಾಲತಿಯಲ್ಲಿರುವ ಏರ್ಪಾಟುಗಳು ಸ್ಟ್ಯಾಂಪಿನ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕಾಗಲಿ ಮೋಸ ನಡೆಯದಂತೆ ಸರ್ಕಾರದ ಪ್ರಯೋಜನವನ್ನು ಕಾಪಾಡುವುದಕ್ಕಾಗಲಿ ಸಾಕಾಗಿಲ್ಲವೆಂತಲೂ, ಹೀಗೆ ಇರುವುದರಿಂದ ಸಂಸ್ಥಾನದ ಸ್ಟ್ಯಾಂಪು ಹುಟ್ಟುವಳಿಯು ಕಳೆದ ಕೆಲವು ವರ್ಷಗಳಿಂದೀಚೆಗೆ ಕಮ್ಮಿಯಾಗುತ್ತಾ ಇದೆಯೆಂತಲೂ ಸರ್ಕಾರದವರು ಅಭಿಪ್ರಾಯಪಡುತ್ತಾರೆ.

2. ಈ ಸ್ಥಿತಿಯನ್ನು ಕ್ರಮಪಡಿಸುವ ಉದ್ದೇಶದಿಂದ ಸರ್ಕಾರದವರು, ಒಂದು ಆಡಳಿತದ ಕಾರ್ಯದ ತರೀಕಾಗಿ, ಬಬ್ಬ ಸ್ಟ್ಯಾಂಪ್ ಕಮಿಷನರನ್ನು ಮೊಕರರ್ರಾಡಿ ಅವರ ಕೆಲಸಗಳನ್ನು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲರ ಅಧಿಕಾರದಲ್ಲಿ ಈಗ ಇರುವವರಿಗೆ ಕೊಟ್ಟಿರುವ ಇತರ ಕೆಲಸಗಳಿಗೆ ಬಾಧಕ ಬಾರದಂತೆ, ಅವರಿಗೆ ವಹಿಸಬೇಕೆಂದು ತೀರ್ಮಾನಿಸಿರುತ್ತಾರೆ. ಸರ್ಕಾರದವರ ಮೇಲುವಿಚಾರಣೆಗೆ ಒಳಪಟ್ಟು ಸ್ಟ್ಯಾಂಪು ಹುಟ್ಟುವಳಿಯ ಕೆಲಸವನ್ನು ನೋಡಿಕೊಳ್ಳುವುದೂ ಸ್ಟ್ಯಾಂಪಿಗೆ ಸಂಬಂಧಪಟ್ಟ ಕಾನೂನುಗಳಿಂದಲೂ ನಿಬಂಧನೆಗಳಿಂದಲೂ ಜನಗಳು ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದೂ ಸ್ಟ್ಯಾಂಪ್ ಕಮಿಷನರ ಕೆಲಸವಾಗಿರುವುದು.

3. ಎಕ್ಸೈಜ್ ಡಿವಿಜನಲ್ ಆಫಿಸರುಗಳೂ ಮತ್ತು ಸರ್ಕಾರದವರು ಆಗಾಗ್ಗೆ ನಿಷ್ಕರ್ಷೆ ಮಾಡುವಂಥಾ ಇತರ ಆಫೀಸರುಗಳೂ ಸ್ಟ್ಯಾಂಪ್ ಕಮಿಷನರ ಕೈಕೆಳಗೆ ಸ್ಟ್ಯಾಂಪ್ ಇನ್‌ಸ್ಪೆಕ್ಟರುಗಳಾಗಿರತಕ್ಕದ್ದು. ಆದುದರಿಂದ ಎಕ್ಸೈಜ್ ಡಿವಿಜನಲ್ ಆಫೀಸರುಗಳನ್ನು ಅಧಿಕಾರಪ್ರಯುಕ್ತವಾದ ಸ್ಟ್ಯಾಂಪ್ ಇನ್‌ಸ್ಪೆಕ್ಟರುಗಳೆನ್ನಾಗಿ ಮೊಕರರ್ರಾಡಿ ಇದೆ.

4. ಸ್ಟ್ಯಾಂಪ್ ಕಾನೂನುಗಳೂ ನಿಬಂಧನೆಗಳೂ ಅನುಸರಿಸಲ್ಪಡುತ್ತವೆಯೊ ಎಂದೂ, ಬಂದು ದಫ್ಹಾ ಉಪಯೋಗಿಸಿದ ಸ್ಟ್ಯಾಂಪನ್ನು ಅಳಿಸದೆ ಬಿಡುವ ಮೂಲಕ ಮೋಸವೇನಾದರೂ ನಡೆಯುತ್ತದೆಯೆ ಎಂದೂ ಗೊತ್ತಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಸ್ಟ್ಯಾಂಪ್ ಕಮಿಷನರು (ಪ್ರತಿ ಸ್ಟ್ಯಾಂಪ್ ಇನ್‌ಸ್ಪೆಕ್ಟರೂ ಸಹ ಅವರ ಅಧಿಕಾರ ಸರಹದ್ದಿನಲ್ಲಿರುವ) ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ ಕೋರ್ಟುಗಳ ರಿಕಾರ್ಡು ಕೊಟ್ಟಪಡಿಗಳನ್ನು ಪರೀಕ್ಷೆ ಮಾಡಬೇಕೆಂದು ಕೋರಿ ಇದೆ. ಅಲ್ಲದೆ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಸ್ಟ್ಯಾಂಪುಗಳಿಗೆ ಇಂಡೆಂಟ್ ಯಾ ದರಖಾಸ್ತು, ಅವುಗಳನ್ನು ಬದಗಿಸುವುದು, ಜಮಾಯಿಸಿಡುವುದು, ಕೆಟ್ಟುಹೋಗದಂತೆ ಭದ್ರವಾಗಿಟ್ಟುಕೊಂಡಿರುವುದು ಮತ್ತು ಮಾರುವುದು, ಇವುಗಳಿಗೆ ಸಂಬಂಧಪಟ್ಟ ಚಾಲ್ತಿ ಹುಕುಂಗಳಿಗೆ ವಿರೋಧವಾಗಿ ಜನಗಳು ನಡೆಯದಂತೆ ಅವರು ನೋಡಿಕೊಳ್ಳಬೇಕು. ಮತ್ತು ಕಾಲಕಾಲಕ್ಕೆ ಬರಬೇಕಾದ ಲೆಕ್ಕಗಳನ್ನು ಸುಸ್ತಯಾಗದೆ ಕಾಲಕ್ಕೆ ಸರಿಯಾಗಿ ಅವರು ತರಿಸಿಕೊಂಡು ಅವುಗಳನ್ನು ಮೇಲಿನ ಅಧಿಕಾರಿಗಳಿಗೆ ಕಳುಹಿಸುವುದಕ್ಕೋಸ್ಕರ ತಪ್ಪು ಆಫೀಸಿನಲ್ಲಿ ಬಟ್ಟು ನೇರಿಸಿ ಕ್ರಮಪಡಿಸಿ ಪಟ್ಟಮಾಡಿ ಮೇಲಿನ ಅಧಿಕಾರಿಗಳ ತಿಳಿವಳಿಕೆಗೆ ತರತಕ್ಕ ಆಡಳಿತ ಸಂಬಂಧವಾದ ಅಂಶಗಳೇನಾದರೂ ಇದ್ದರೆ ಅವುಗಳನ್ನು ಅವರ ಅವಧಾನಕ್ಕೆ ತರಬೇಕು. ಸ್ಟ್ಯಾಂಪು ಇನ್‌ಸ್ಪೆಕ್ಟರುಗಳ ಆಚರಣೆಯ ಬಗ್ಗೆ ಅವಶ್ಯವಾದ ಹುಕುಂಗಳನ್ನು ಕೊಡಬೇಕೆಂದು ಸ್ಟ್ಯಾಂಪ್ ಕಮಿಷನರನ್ನು ಕೋರಿ ಇದೆ.

5. ಸ್ಟ್ಯಾಂಪಿಗಾಗಿ ದರಖಾಸ್ತು ಮಾಡುವುದಕ್ಕೂ ಅವುಗಳ ಖರೀದಿಗೂ ಅವುಗಳನ್ನು ಬದಗಿಸುವುದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಆಯಾಯ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರೇ ಅಧಿಕಾರಪ್ರಯುಕ್ತವಾದ ಡಿಸ್ಟ್ರಿಕ್ಟ್ ಸ್ಟ್ಯಾಂಪ್ ಆಫಿಸರಂತೆ ಮಾಡತಕ್ಕದ್ದು.

6. ಸ್ಟ್ಯಾಂಪು ತಯಾರಿಯ ಮೇಲುವಿಚಾರಣೆಗಾಗಿ ಈಗ ಇರುವ ಏರ್ಪಾಡುಗಳು ಅಷ್ಟು ಕಾರ್ಯಕಾರಿಯಾಗಿಲ್ಲ. ಸ್ಟ್ಯಾಂಪು ತಯಾರಿಗೆ ಸಂಬಂಧಪಟ್ಟ ಏರ್ಪಾಡನ್ನೆಲ್ಲಾ ಜಾಗ್ರತೆಯಿಂದ ಸಂಪೂರ್ಣವಾಗಿ ಪರಿಶೋಧನೆ ಮಾಡುವುದು ಸ್ಟ್ಯಾಂಪು ಹುಟ್ಟುವಳಿಯ ಪ್ರಯೋಜನಕ್ಕೆ ಅತ್ಯವಶ್ಯವಾಗಿದೆಯೆಂದು ಸರ್ಕಾರದವರು ಭಾವಿಸುತ್ತಾರೆ. ಆದುದರಿಂದ ಸ್ಟ್ಯಾಂಪು ಕಮಿಷನರಿಗೆ ಸ್ಟ್ಯಾಂಪು ತಯಾರಿಯ ಮೇಲುವಿಚಾರಣೆಯನ್ನೂ ಒಪ್ಪಿಸಿ ಇದೆ.

7. ಮೈಸೂರು ಸ್ಟ್ಯಾಂಪ್ ಮತ್ತು ಕೋರ್ಟು ಫೀಜು ರೆಗ್ಯುಲೇಷನುಗಳ ಮೇರೆಗೆ ರವಿನ್ಯೂ ಮೇಲು ವಿಚಾರಣೆಯ ಮುಖ್ಯಾಧಿಕಾರವು ಹಿಂದಿನಂತೆ ಸರ್ಕಾರಕ್ಕೆ ಸೇರಿ ಇರುವುದು.

8. ಸೆಂಟ್ರಲ್, ಬ್ರಾಂಚ್ ಮತ್ತು ಸ್ಥಳೀಯ (ಲೋಕಲ್) ಡಿಪೋಗಳ ಮೇಲು ವಿಚಾರಣೆಯು, ಸ್ಟ್ಯಾಂಪು ಹುಟ್ಟುವಳಿಯ ಸಂಸ್ಥಾನದ ಆಡಳಿತಕ್ಕೆ ಜವಾಬ್ದಾರಿಯುಳ್ಳ ಅಧಿಕಾರಿಯಾಗಿ ಸ್ಟ್ಯಾಂಪ್ ಕಮಿಷನರಿಗೆ ಸೇರಿ ಇರುವುದು. ಸ್ಟ್ಯಾಂಪ್ ಸೂಪರ್‌ಟೆಂಡೆಂಟ್ ಸ್ಟ್ಯಾಂಪ್ ಕಮಿಷನರಿಗೆ ಅಧೀನನಾಗಿರತಕ್ಕದ್ದು; ಮತ್ತು ಯಾವುದಾದರೂ ಸ್ಥಳೀಯ ಡಿಪೋವಿನಲ್ಲಿ ಸ್ಟ್ಯಾಂಪಿನ